ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಡೀಮ್ಡ್ ಡೇಟ್‌ಗಳನ್ನು ನಿಗಧಿಪಡಿಸುವ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದಚುನಾಯಿತರಾದವರು):-

819 (706) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮುಂಬಡ್ತಿಗೆ ಸಂಬಂಧಿಸಿದಂತೆ ಡೀಮ್ಡ್ ಡೇಟ್ ನಿಗದಿಪಡಿಸಲು ಇರುವ ನಿಯಮಗಳೇನು ; ನಿಯಮದ ಆದೇಶದ ಪ್ರತಿ ನೀಡುವುದು ; ಎಷ್ಟು ಐ.ಎ.ಎಸ್./ಐ.ಪಿ.ಎಸ್ ಅಧಿಕಾರಿಗಳಿಗೆ ಡೀಮ್ಡ್ ಡೇಟ್ ನೀಡಿ ಮುಂಬಡ್ತಿ ನೀಡಲಾಗಿದೆ ; ಎಷ್ಟು ವರ್ಷಗಳ ಕಾಲ ಡೀಮ್ಡ್ ಡೇಟ್ ನೀಡಲಾಗಿದೆ ;

(ಆ) ಮುಂಬಡ್ತಿಯನ್ನು ನೀಡುವ ಸಂದರ್ಭದಲ್ಲಿ ಯಾವ ಯಾವ ಸಂದರ್ಭಗಳಲ್ಲಿ ಈ ಮುಂಬಡ್ತಿ ದಿನಾಂಕವನ್ನು ಈ ಹಿಂದೆಯೇ ಮುಂಬಡ್ತಿ ಹೊಂದಿರುವಂತೆ ಪರಿಗಣಿಸಲಾಗಿದೆ ; ಇದಕ್ಕೆ ಇರುವ ಮಾನದಂಡಗಳೇನು ;

(ಇ) ವಾಸ್ತವವಾಗಿ ಮುಂಬಡ್ತಿ ಹೊಂದಿರುವ ದಿನಾಂಕದಿಂದ ಹಿಂದಿನ ದಿನಾಂಕದಲ್ಲಿ ಮುಂಬಡ್ತಿ ಹೊಂದಿರುವಂತೆ ಪರಿಗಣಿಸಲಾಗಿದೆ ಎಂಬುದಾಗಿ ತಿಳಿಸಿ ನಿಗದಿಪಡಿಸುವ ದಿನಾಂಕವು ಗರಿಷ್ಠ ಎಷ್ಟು ವರ್ಷಗಳ ವರೆಗಿನ ಮಿತಿಗೆ ಒಳಪಟ್ಟಿದೆ ; ಡೀಮ್ಡ್ ಡೇಟ್‌ಗಳನ್ನು ನಿಗದಿಪಡಿಸುವಲ್ಲಿ ಅವ್ಯವಹಾರ ಭ್ರಷ್ಟಾಚಾರವಾಗಿರುವ ಕುರಿತು ಎಷ್ಟು ಪ್ರಕರಣಗಳು ವರದಿಯಾಗಿವೆ ;

(ಈ) ವಾಸ್ತವವಾಗಿ ಮುಂಬಡ್ತಿ ಹೊಂದಿರುವ ದಿನಾಂಕದಿಂದ 3 ರಿಂದ 13 ವರ್ಷಗಳವರೆಗಿನ ಹಿಂದಿನ ದಿನಾಂಕವನ್ನು ಮುಂಬಡ್ತಿ ಹೊಂದಿರುವಂತೆ ಪರಿಗಣಿಸಿ ನಿಗದಿಪಡಿಸಲು ನಿಯಮದಲ್ಲಿ ಅವಕಾಶವಿದೆಯೇ ; ಇದ್ದಲ್ಲಿ, ಯಾವ ನಿಯಮದ ಪ್ರಕಾರ 3 ರಿಂದ 13 ವರ್ಷಗಳವರೆಗಿನ ಹಿಂದಿನ ದಿನಾಂಕವನ್ನು ಡೀಮ್ಡ್ ಟು ಬಿ ಪ್ರಮೋಟೆಡ್ ಎಂದು ಪರಿಗಣಿಸಲು ಅವಕಾಶವಿದೆ ? (ಸದರಿ ನಿಯಮದ ಪ್ರತಿಯನ್ನು ಒದಗಿಸುವುದು)